ಅಷ್ಟರಲ್ಲಿ ಅಲ್ಲಿಗೆ ಗೋಪಣ್ಣ ಬಂದಿದ್ದರು.

'ಮೀನು ಆಗಬಹುದಲ್ವಾ ಊಟಕ್ಕೆ? ತಿಂತೀರಲ್ಲ?'

ಹೌದು. ಇದೀಗ ಬಹಳ ಮುಖ್ಯ, ಥತ್. ಅನಿಸಿ ಮುಖ ಮುದುರಿದ್ದೆ.

'ಖಂಡಿತಾ, ನಿಮ್ಮ ಕಡೆ ಒಳ್ಳೆಯ ಮೀನು ಸಿಗುವುದಂತಲ್ಲ?' ಮತ್ತೆ ನಕ್ಕಳು.

'ಯಾವೂರು ನಿಮ್ಮದು?' ಗೋಪಣ್ಣ ಮಾತಿಗೆ ನಿಂತರು.

'ತಿರುವಣ್ಣಾಮಲೈ'

ಹಾಗಾದರೆ ಅಲ್ಲಿಂದ ಹೊರಟು ಇಷ್ಟು ದೂರ ಬಂದಳೇ? ಇದನ್ನ ಹೇಳಿ ಹೋಗಲು?

'ಹೇಗೆ ಬಂದಿರಿ?ಎಲ್ಲಿ ಉಳಕೊಂಡಿದ್ದೀರಿ?' ಗೋಪಣ್ಣ.

ಇವತ್ತೇ ರಾತ್ರಿ ಹೊರಡುತ್ತೇನೆ, ಬೆಳಗ್ಗೆಯಿನ್ನೂ ಬಂದೆ, ಫ್ರೆಶ್ ಆಗಿ ಸೀದ ಇಲ್ಲಿಗೇ ಬಂದಿದ್ದೀನಿ'

'ಮೇಡಂ ನೀವು ಸುಮ್ಮನೆ ಶ್ರಮ ತಗೊಂಡ್ರಿ, ನನ್ನ ಮೇಲ್ ಐಡಿ ಇತ್ತು'.

'ಸರ್, ನೋಡಿ ನಾನು ನಿಮ್ಮ ಬಳಿ ಬಂದ ಉದ್ದೇಶ ಇಷ್ಟೇ, ನಿಮ್ಮನ್ನ ನೇರ ನೋಡಿ ಮಾತಾಡಿ ಹೋಗಬೇಕಿತ್ತು. ನೀವು ಹೇಗೂ ಪುಸ್ತಕ ತರುತ್ತೀರಿ ಅಲ್ಲವೆ? ಅದರಲ್ಲಿ ಈ ಕಥೆಯನ್ನು ಕೈಬಿಡುವ ಆಲೋಚನೆಯನ್ನಂತೂ ಖಂಡಿತಾ ಮಾಡಲಾರಿರಿ ಅಂತ ಗೊತ್ತು, ಮತ್ತೇನಿಲ್ಲ ಈ ಸಾಲುಗಳನ್ನ ಕೇಳಿ.'

ಅವಳು ಓದತೊಡಗಿದ್ದಳು.

'ನಾವು ಗಂಡಹೆಂಡಿರಲ್ಲ. ನಾವು ಒಟ್ಟಿಗೇ ಒಂದೇ ಮನೆಯೊಳಗೆ ವಾಸಿಸುವುದಿಲ್ಲ... ನಮ್ಮ ಸಂಬಂಧಕ್ಕೊಂದು..'

'ನಿಲ್ಲಿಸಿ ಇದೇನಿದು?'

ನಾನು ತಡೆದೆ.

'ಸರ್ ನೀವಿದನ್ನ ನಿಮ್ಮ ಕಥೆಯ ಪರಿಷ್ಕೃತ ಎಡಿಶನ್‌ನಲ್ಲಿ ಸೇರಿಸಬೇಕು. ಇನ್‌ಫ್ಯಾಕ್ಟ್ ಇನ್ನೂ ಇದೆ ಎರಡು ಪುಟಗಳು ಓದ್ತೀನಿ ಕೇಳಿ.'

'ನೋ, ನೋವೇ. ಫಸ್ಟಫಾಲ್ ನಾನು ಒಂದ್ಸಲ ಬರೆದ ಕಥೇನ ಮತ್ತೆ ಎಡಿಟ್ ಮಾಡಿ ಹಾಕಲ್ಲ, ಎರಡನೇದು,ನೀವ್ಯಾರೋ ಏನೋ, ನಿಮ್ಮನ್ನ ಸುಮ್ಸುಮ್ನೆ ಕಥೆಗೆ ಲಿಂಕ್ ಮಾಡಿಕೊಂಡು ಇದೇನನ್ನೋ ತಂದು ನಿಮ್ ಕಥೆಲಿ ಸೇರ್ಸಿ ಅಂದ್ರೆ ಹಾಗೆಲ್ಲ ಸೇರ್ಸಕ್ಕಾಗಲ್ಲ ಹೌ ಡೇರ್ ಯು, ಜಸ್ಟ್ ಗೇಟ್.. ಯು ಪ್ಲೀಸ್ ಜಸ್ಟ್ ಲೀವ್' ನಾನು ಚೀರಿದೆ.

ಅವಳು ಅವಿಚ್ಛಿನ್ನವಾಗಿದ್ದಳು. ಸಣ್ಣಗೆ ಕುಹಕದೊಂದು ಸೆಳಕು ಇರುವ ನಗುವೊಂದನ್ನು ಮುಖದ ತುಂಬಾ ಪಸರಿಸಿಕೊಂಡು ಅಂದಳು 'ನಾನು ಕೇಳಬೇಕು ಹೌ ಡೇರ್ ಯು ಅಂತ'

'ಮೇಡಂ, ಎನಫ್ ಈಸ್ ಎನಫ್ ಯು ಮೇ ಪ್ಲೀಸ್ ಗೋ ನೌ, ಹೀಗೆಲ್ಲ ನನ್ನ ಪರ್ಸನಲ್ ಟೈಮ್‌ನ್ನ ಹಾಳು ಮಾಡುವ ಯಾವ ರೈಟ್ಸ್ ಇಲ್ಲ ನಿಮಗೆ'



'ಸರ್, ನಾನೊಂದು ಹೇಳಲಾ? ನೀವು ಕಥೆಗಾರರು. ಸೂಕ್ಷ್ಮ ಒಳನೋಟವುಳ್ಳವರು ಎಂಬ ಒಂದು ಟ್ಯಾಗ್‌ಲೈನ್ ಇಟ್ಟುಕೊಂಡು ಯಾರ ಬದುಕಿನೊಳಗಾದರೂ ಬೆಳಕು ಹಾಯಿಸಿ ಹೊರಜಗತ್ತಿಗೆ ತೋರಿಸಿ ಮುಗುಮ್ಮಾಗಿ ಬಿಡಬಲ್ಲಿರಿ, ಅವರು ಮಾತ್ರ ಜಗತ್ತಿನ ಕಣ್ಣೆದುರು ಬೆತ್ತಲಾಗುತ್ತಾರೆ ಬಟ್ಟೆಯುಟ್ಟಿದ್ದರೂ! ನಿಮ್ಮ ಅಂತಃಕರಣದ ಕಣ್ಣಿಗೆ ಅದೆಲ್ಲ ಕಾಣುವುದಿಲ್ಲ. ನಿಜ ಹೇಳಬೇಕೆಂದರೆ ಈ ಕಥೆಗಾರರ ಬಳಿ ಯಾವ ಕಾರಣಕ್ಕೂ ಕಷ್ಟಸುಖ ಹೇಳಿಕೋಬಾರದು, ನಮ್ಮ ಕಷ್ಟ ಅವರಿಗೆ ಕಥೆಯಂತೆ ಕಾಣಿಸುತ್ತದೆ.'